# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 353 |
| **ಸದಸ್ಯರ ಹೆಸರು** | : | ಶ್ರೀ ರಮೇಶ್ ಬಾಬು (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : | 29-01-2026 |
| **ಉತ್ತರಿಸಬೇಕಾದ ಸಚಿವರು** | : | ಉಪ ಮುಖ್ಯಮಂತ್ರಿಯವರು |

****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 110 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಯೋಜನೆಯಲ್ಲಿ ಇಲ್ಲಿಯವರೆಗೆ ಎಷ್ಟು ಗ್ರಾಮಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ; ನೀರಿನ ಸಂಪರ್ಕಕ್ಕೆ ಬಾಕಿ ಇರುವ ಗ್ರಾಮಗಳೆಷ್ಟು; | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 110 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಯೋಜನೆ ಅಡಿಯಲ್ಲಿ 100 ಹಳ್ಳಿಗಳಿಗೆ ನೀರು ಸರಬರಾಜು ಕಲ್ಪಿಸಲಾಗಿದ್ದು, 10 ಹಳ್ಳಿಗಳಿಗೆ ನೀರಿನ ಸಂಪರ್ಕ ಒದಗಿಸುವುದು ಬಾಕಿ ಇರುತ್ತದೆ. |
| ಆ) | ಈ ಯೋಜನೆಯ ಕಾಮಗಾರಿಗೆ ನಿಗದಿಗೊಳಿಸಿದ್ದ ಅಂದಾಜು ಪಟ್ಟಿ ಎಷ್ಟು; ಕಾಮಗಾರಿ/ಯೋಜನೆಯನ್ನು ಜಾರಿಗೊಳಿಸಲು ನಿಗದಿಗೊಳಿಸಿದ ಸಮಯವೆಷ್ಟು; ಕಾಮಗಾರಿ ಸಂಪೂರ್ಣ ಜಾರಿಯಾಗದೇ ಇದ್ದಲ್ಲಿ ಕಾರಣಗಳೇನು; | • ಸದರಿ ಯೋಜನೆಯನ್ನು ರೂ.982.77 ಕೋಟಿ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿರುತ್ತದೆ.<br>• ಸದರಿ ಕಾಮಗಾರಿ / ಯೋಜನೆಯನ್ನು ಜಾರಿಗೊಳಿಸಲು 24 ತಿಂಗಳುಗಳನ್ನು ನಿಗದಿಗೊಳಿಸಲಾಗಿರುತ್ತದೆ.<br><br>ಈ ಕೆಳಕಂಡ ಕಾರಣಗಳಿಂದ 10 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವಲ್ಲಿ ವಿಳಂಬವಾಗಿರುತ್ತದೆ.<br><br>• ಮಹದೇವಪುರ ವಲಯದಲ್ಲಿ ಕೆ.ಆರ್.ಡಿ.ಸಿ.ಎಲ್ ವತಿಯಿಂದ ವರ್ತೂರು ಹೊಸ ಸೇತುವೆಯಿಂದ ವರ್ತೂರು ಪೊಲೀಸ್ ಸ್ಟೇಷನ್ ರವರೆಗೆ ರಸ್ತೆಯನ್ನು 60 ಅಡಿಯಿಂದ 100 ಅಡಿವರೆಗೆ ವಿಸ್ತರಣೆ ಮಾಡುವ ಸಂಬಂಧ, ಭೂಸ್ವಾಧೀನ ಪ್ರಕ್ರಿಯೆ ಹಾಗೂ ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಪ್ರಗತಿಯಲ್ಲಿದ್ದ ಕಾರಣ, ಫೀಡರ್ ಮೇನ್ ಅಳವಡಿಕೆಗೆ ನಿರ್ದಿಷ್ಟ ಸ್ಥಳ ನಿಗದಿಗೊಳ್ಳದೆ ಇರುವುದರಿಂದ 5 ಹಳ್ಳಿಗಳಾದ ಹೊರಹುಣಸೆ, ವರ್ತೂರು, ಗುಂಜೂರು, ಬಳಗೆರೆ ಮತ್ತು ಭಾಗಶಃ ಪಣತ್ತೂರು ಹಳ್ಳಿಗಳಿಗೆ ಆಂತರಿಕ ನೀರಿನ ಕೊಳವೆಗಳನ್ನು ಅಳವಡಿಸಲಾಗಿದೆ. ಆದರೆ, ನೀರು ಚಾಲನೆಗೊಳಿಸಿರುವುದಿಲ್ಲ.<br>• ಮುಂದುವರೆದು, ಬ್ಯಾಟರಾಯನಪುರ ವಲಯದ 5 ಹಳ್ಳಿಗಳಾದ ಕಟ್ಟಿಗೇನಹಳ್ಳಿ, ಶ್ರೀನಿವಾಸಪುರ, ಬೆಳ್ಳಹಳ್ಳಿ, ತಿರುಮೇನಹಳ್ಳಿ, ಭಾಗಶಃ ಚೊಕ್ಕನಹಳ್ಳಿ ಹಳ್ಳಿಗಳಿಗೆ ನೀರಿನ ಕೊಳವೆಗಳನ್ನು ಅಳವಡಿಸಿದ್ದು, ಸದರಿ ಪ್ರದೇಶಗಳಿಗೆ ಚೊಕ್ಕನಹಳ್ಳಿ ಜಲಸಂಗ್ರಹಗಾರ ಕಾಮಗಾರಿ ಪೂರ್ಣಗೊಂಡ ನಂತರ ನೀರು ಪೂರೈಸಲಾಗುವುದು. ಚೊಕ್ಕನಹಳ್ಳಿ ಜಲಸಂಗ್ರಹಗಾರಕ್ಕೆ ಸಂಬಂಧಿಸಿದ ಸ್ಥಳದ ಪ್ರಕರಣವು ನ್ಯಾಯಾಲಯದಲ್ಲಿ 2025ರಲ್ಲಿ ಇತ್ಯರ್ಥಗೊಂಡಿದ್ದು, ಪ್ರಸ್ತುತ |

| | | |
|---|---|---|
| | | ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| ಇ) | ಸದರಿ ಯೋಜನೆಯ ಕಾಮಗಾರಿಯನ್ನು ಎಷ್ಟು ಪ್ಯಾಕೇಜುಗಳಲ್ಲಿ ಗುತ್ತಿಗೆದಾರರಿಗೆ ನೀಡಲಾಗಿದೆ; ಪ್ರತಿ ಕಾಮಗಾರಿಗಳಿಗೆ ನಿಗಧಿಪಡಿಸಿರುವ ಕಾಲಮಿತಿ ಎಷ್ಟು; ನಿಗಧಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸಿ ಕುಡಿಯುವ ನೀರಿನ ಸಂಪರ್ಕ ನೀಡಲಾಗಿದೆಯೇ; (ಪೂರ್ಣ ವಿವರಗಳನ್ನು ಒದಗಿಸುವುದು) | • ಬಿ.ಬಿ.ಎಂ.ಪಿ (ಹಾಲಿ ಜಿ.ಬಿ.ಎ) ವ್ಯಾಪ್ತಿಯ 110 ಹಳ್ಳಿಗಳನ್ನು ಮಹದೇವಪುರ ವಲಯ, ಆರ್.ಆರ್.ನಗರ ವಲಯ, ಬ್ಯಾಟರಾಯನಪುರ ವಲಯ, ಬೊಮ್ಮನಹಳ್ಳಿ ಹಾಗೂ ದಾಸರಹಳ್ಳಿ ವಲಯ ಎಂದು 5 ಪ್ಯಾಕೇಜುಗಳಾಗಿ ವಿಂಗಡಿಸಿ ಗುತ್ತಿಗೆ ನೀಡಲಾಗಿರುತ್ತದೆ.<br>• ಪ್ರತೀ ಪ್ಯಾಕೇಜಿಗೆ 24 ತಿಂಗಳುಗಳ ಕಾಲಮಿತಿ ನಿಗದಿಪಡಿಸಲಾಗಿರುತ್ತದೆ.<br>• ಪ್ರಸ್ತುತ, ಮಹದೇವಪುರ ವಲಯದ 5 ಹಳ್ಳಿಗಳು, ಹಾಗೂ ಬ್ಯಾಟರಾಯನಪುರ ವಲಯದ 5 ಹಳ್ಳಿಗಳನ್ನು ಹೊರತುಪಡಿಸಿ, ಉಳಿದ ಪ್ರದೇಶಗಳಿಗೆ ಜಲಮಂಡಳಿಯ ಮಾನದಂಡಗಳ ಅನುಸಾರ ನೀರಿನ ಸಂಪರ್ಕಗಳನ್ನು ಒದಗಿಸಲಾಗುತ್ತಿದೆ. |
| ಈ) | ಕಾವೇರಿ ಕುಡಿಯುವ ನೀರಿನ ಯೋಜನೆಯಲ್ಲಿ ತಲಘಟ್ಟಪುರ ಹಳೇ ಸರ್ವೆ ನಂಬರ್ ಭಾಗದ (ನ್ಯಾಯಾಂಗ ಬಡಾವಣೆ ಮುಖ್ಯ ರಸ್ತೆ 1 ರಿಂದ 4) ಕೆಲವು ರಸ್ತೆಗಳ ನಿವಾಸಿಗಳಿಗೆ ನೀರಿನ ಸಂಪರ್ಕ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ನೀರಿನ ಸಂಪರ್ಕ ನೀಡಲಾಗುವುದು? | • ಗಮನಕ್ಕೆ ಬಂದಿದೆ.<br>• ತಲಘಟ್ಟಪುರ ಹಳೇ ಸರ್ವೆ ನಂಬರ್ ಭಾಗವು (ನ್ಯಾಯಾಂಗ ಬಡಾವಣೆ ಮುಖ್ಯರಸ್ತೆ 1 ರಿಂದ 4) ಬಿಡಿಎ ಅನುಮೋದಿತ ಪ್ರದೇಶವಾಗಿದ್ದು, ಬೆಂಗಳೂರು ಜಲಮಂಡಳಿಯ ಸುತ್ತೋಲೆ ಅನುಸಾರ ಪ್ರತೀ ಚದರ ಅಡಿಗೆ ರೂ.60/- ರಂತೆ ಇ.ಟಿ.ಪಿ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.<br>• ಇದಲ್ಲದೆ, ಈ ಸಂಬಂಧ, ಸದರಿ ಬಡಾವಣೆಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 9608/2025ರ ದಾವೆಯನ್ನು ಹೂಡಿರುತ್ತಾರೆ. ಸದರಿ ದಾವೆ ಇತ್ಯರ್ಥಗೊಂಡ ನಂತರ ಬೆಂಗಳೂರು ಜಲಮಂಡಳಿಯಿಂದ ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. |

**ಸಂಖ್ಯೆ:** ನಅಇ 35 ಎಂಎನ್ಐ 2026(ಇ)

**(ಡಿ ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿ**